

ಕೆ.ಜಿ.ಎಫ್ ಪೊಲೀಸ್ ಜಿಲ್ಲೆ



# -- ಪ್ರಕಟಣೆ --

**ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿದ್ದೀರಾ...???..ನಿಮಗೆ ಮುಂದೇನು ಮಾಡಬೇಕೆಂದು ತೋಚುತ್ತಿಲ್ಲವೇ..? ಸಂರಕ್ಷಣೆ ಅಗತ್ಯವೇ...? ಚಿಂತಿಸಬೇಡಿ ...!!!... ಇಲ್ಲಿದೆ ನಿಮಗೆ ಮಾಹಿತಿ.**

## ❖ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ದೊರಕುವ ನೆರವು

- ❖ ಕರ್ನಾಟಕ ಸರ್ಕಾರವು ವರದಕ್ಷಿಣೆ ಕಿರುಕುಳ, ಅತ್ಯಾಚಾರ, ಲೈಂಗಿಕ ಕಿರುಕುಳ, ಕೌಟುಂಬಿಕ ದೌರ್ಜನ್ಯ ಮೊದಲಾದ ವಿವಿಧ ರೀತಿಯ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಹಾಯ ಒದಗಿಸುವ ದೃಷ್ಟಿಯಿಂದ “ಸಾಂತ್ವನ ಯೋಜನೆ ” ಯನ್ನು 2000–2001 ನೇ ಸಾಲಿನಿಂದ ಜಾರಿಗೆ ತಂದಿರುತ್ತದೆ.

- ❖ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ರವರನ್ನು ಸಂಪರ್ಕಿಸಿ ತನಗಾದ ದೌರ್ಜನ್ಯದ ಕುರಿತು ದೂರು ನೀಡಬಹುದು.

- ❖ ಗಂಡನಿಂದ ತೊರೆಯಲ್ಪಟ್ಟಿದ್ದಲ್ಲಿ, ಈ ಬಗ್ಗೆ ದೂರಿನೊಂದಿಗೆ ಸಿ.ಡಿ.ಪಿ.ಓ ರವರನ್ನು ಸಂಪರ್ಕಿಸಿ ದೂರು ಸಲ್ಲಿಸಿದಲ್ಲಿ, ಸಂಬಂಧಪಟ್ಟ ಇಲಾಖೆಯಿಂದ ಮಹಿಳೆಯ ಪತಿಗೆ ನೋಟೀಸು ನೀಡಿ ಕರೆಸಿ ಅವರೊಂದಿಗೆ ಸರಿಯಾದ ರೀತಿಯಲ್ಲಿ ಸಮಾಲೋಚನೆ ನಡೆಸಿ ರಾಜಿ ಸಂಧಾನ ನಡೆಸಲಾಗುವುದು. ಇಲ್ಲದಿದ್ದಲ್ಲಿ ಕೌಟುಂಬಿಕ ನ್ಯಾಯಾಲಯಕ್ಕೆ ದೂರನ್ನು ಸಲ್ಲಿಸಿ, ಜೀವನಾಂಶ ಪಡೆದುಕೊಳ್ಳಬಹುದು.

- ❖ ಮನೆಯಿಂದ ಹೊರ ಹಾಕಲ್ಪಟ್ಟಿದ್ದರೆ, ಅದೇ ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ. ಇಲ್ಲವಾದಲ್ಲಿ ರಕ್ತ ಸಂಬಂಧಿಗಳೊಂದಿಗೆ ವಾಸಕ್ಕೆ ವ್ಯವಸ್ಥೆ ಮಾಡಿಕೊಡಲಾಗುತ್ತದೆ.

“ಸಾಂತ್ವನ” ಯೋಜನೆಯಡಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಲಾಗಿರುತ್ತದೆ, ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಈ ಸಮಿತಿಯ ಸದಸ್ಯ ಕಾರ್ಯದರ್ಶಿಯವರಾಗಿದ್ದು, ಜಿಲ್ಲಾ ಕಾನೂನು ನೆರವು ಸಮಿತಿ/ ಬಾರ್ ಅಸೋಸಿಯೇಷನ್ ನ ಮಹಿಳಾ ಪ್ರತಿನಿಧಿ, ಜಿಲ್ಲಾ ಆರಕ್ಷಕ ಅಧೀಕ್ಷಕರು, ಜಿಲ್ಲಾ ಪಂಚಾಯಿತಿ ನ್ಯಾಯ ಸಮಿತಿಯ ಅಧ್ಯಕ್ಷರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿಯ ಜಿಲ್ಲಾ ಸದಸ್ಯರು ಈ ಸಮಿತಿಯ ಉಳಿದ ಸದಸ್ಯರಾಗಿರುತ್ತಾರೆ.

## ❖ "ಸಾಂತ್ವನ" ಯೋಜನೆಯಡಿ ಸಿಗುವ ಸೌಲಭ್ಯಗಳು

1. ಸ್ವೀಕಾರ ಕೇಂದ್ರ/ರಾಜ್ಯ ಮಹಿಳಾ ನಿಲಯಗಳಲ್ಲಿ ತಾತ್ಕಾಲಿಕ ಆಶ್ರಯ.
2. ಸಲಹೆಗಾರರ ಮೂಲಕ ಸಮಲೋಚನೆಯ ಸೇವೆ.
3. ಕಾನೂನು ನೆರವು ಪ್ರಕರಣಗಳಿಗೆ ಸಂಬಂಧಿಸಿದಂತೆ ವಕೀಲರನ್ನು ನೇಮಕ. ರೂ. 2000/- ಆರ್ಥಿಕ ನೆರವು.
4. ವಿದ್ಯಾಭ್ಯಾಸ ಮುಂದುವರಿಸಲು ಉದ್ಯೋಗಸ್ಥ ಮಹಿಳೆಯರ ವಸತಿಗೃಹಗಳಲ್ಲಿ ಆಶ್ರಯ.
5. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವಾನ ಕೇಂದ್ರದಲ್ಲಿ ದೂರು ದಾಖಲಾದ ನಂತರ ಆರ್ಥಿಕ ನೆರವಿಗಾಗಿ ರೂ. 2000/- ದಿಂದ 10,000/- ವರೆಗೆ ಆರ್ಥಿಕ ಪರಿಹಾರ.
6. ದೌರ್ಜನ್ಯಕ್ಕೆ ಒಳಗಾದ ಮಹಿಳೆ ಮರಣಹೊಂದಿದ ಪಕ್ಷದಲ್ಲಿ ಅಂತಹ ಮಹಿಳೆಯರ ಮಕ್ಕಳ ಹೆಸರಿನಲ್ಲಿ ರೂ. 5000/- ದಿಂದ 10,000/- ವರೆಗೆ ಶಿಕ್ಷಣ ಹಾಗೂ ಪುನರ್ವಸತಿಗೆ ನೆರವು.
7. "ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ" ದಿಂದ ಆದಾಯೋತ್ಪನ್ನ ತರಬೇತಿ ಮತ್ತು ತರಭೇತಿ ಸಮಯದಲ್ಲಿ ವಸತಿ ವ್ಯವಸ್ಥೆ ತರಬೇತಿಗೆ ರೂ. 10,000/- ನೆರವು.

**ಪರಿಹಾರಕ್ಕಾಗಿ ಸಂಪರ್ಕಿಸಬೇಕಾದ ಇಲಾಖೆ ವಿವರ:**

1. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ ನರ್ಸಿಂಗ್ ಹೊಂ ಒಂದನೇ ಮಹಡಿ, ಕುವೆಂಪು ನಗರ, ಕೋಲಾರ.

ಇ-ಮೇಲ್: ddwcdkolar@gmail.com

## "ಹಿಂಸೆ ರಹಿತ ಜೀವನ ನಮ್ಮ ಹಕ್ಕು"

(ಈ ಮಾಹಿತಿಯು ಸಾರ್ವಜನಿಕರಿಗೆ ಸಾಮಾನ್ಯ ತಿಳುವಳಿಕೆಗಾಗಿ)